**ಸಾಕ್ಷಿಯನ್ನು ದಿಃ 12.11.2024 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ  ಆರೋಪಿ ಪರ ವಕೀಲರಿಂದಃ**

1. ನಾನು ವ್ಯವಸಾಯ ಮಾಡುತ್ತೇನೆ. ನಾನು ಲೇವಾದೇವಿ ವ್ಯವಹಾರ ಮಾಡುವುದಿಲ್ಲ. ನಮ್ಮ ಸಂಬಂಧಿಕರಿಗೆ, ಪರಿಚಯಸ್ಥರಿಗೆ ಸಣ್ಣಪುಟ್ಟ ಹಣ ಕೊಡುತ್ತೇನೆ ಎಂದು ನುಡಿಯುತ್ತಾರೆ.

2. ಆ ರೀತಿ ಸುಮಾರು 4-5 ಜನಕ್ಕೆ ಹಣ ನೀಡಿದ್ದೇನೆ. ಆರೋಪಿಗೆ 1.50 ರೂಪಾಯಿ ದಂತೆ ಬಡ್ಡಿ ಮಾತುಕತೆಯಾಗಿತ್ತು.

3. ಬೇರೆಯವರಿಗೆ ಎಷ್ಟು ಬಡ್ಡಿ ಎಂದರೆ, 1.50 ರೂಪಾಯಿ ಅಥವಾ 2 ರುಪಾಯಿ ಎಂದು ನುಡಿಯುತ್ತಾರೆ.

4. ನಾನು 10 ವರ್ಷದಿಂದ ಈಚೆಗೆ ಆ ರೀತಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದೇನೆ.

5. ನಾನು ವ್ಯವಹಾರವನ್ನು ನಂಬಿಕೆಯ ಮೇಲೆ ಮಾಡುತ್ತೇನೆ. ನೀವು ಹೇಳುವಂತೆ ಆರೋಪಿ ಹಣ ಪಡೆದು, ಒಂದು ತಿಂಗಳ ನಂತರ ಚೆಕ್ಕನ್ನು ನೀಡಿರುತ್ತಾರೆ.

6. ಆರೋಪಿ ನನಗೆ ಈ ವ್ಯವಹಾರ ಆಗುವಕ್ಕಿಂತ 10-18 ವರ್ಷದಿಂದ ಪರಿಚಯ. ಅವರು ಮೇಲಿನ ತುಂಗಾ ಗ್ರಾಮದವರು.

7. ಆರೋಪಿಯ ಪತ್ನಿಯ ಹೆಸರು ನನಗೆ ಗೊತ್ತಿಲ್ಲ. ಅವರಿಗೆ ಒಬ್ಬ ಹಿರಿಯ ಪತ್ನಿ ಮಗ ಹಾಗೂ ಕಿರಿಯ ಪತ್ನಿಗೆ ಒಬ್ಬ ಮಗ ಇದ್ದಾರೆ. ಅವರ ಹೆಸರುಗಳು ನನಗೆ ಗೊತ್ತಿಲ್ಲ.

8. ಆರೋಪಿಯ ಪತ್ನಿಯರು ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ.

9. ನಾನು ಆರೋಪಿಯ ಮನೆಗೆ ಹಿಂದೆ ಹೋಗಿದ್ದೆ, ಆ ರೀತಿ 20 ವರ್ಷದ ಹಿಂದೆ 1-2 ಬಾರಿ ಹೋಗಿರುತ್ತೇನೆ. ಆ ನಂತರವೂ ಸಿಕ್ಕಿದಾಗ ಮಾತುಕತೆ ಆಗುತ್ತಿತ್ತು.

10. ಆರೋಪಿಯು ದಿಃ 14.06.2021 ರಂದು ನನ್ನ ಬಳಿ ಹಣ ಪಡೆದಿದ್ದರು. ಅದಕ್ಕಿಂತ 15 ದಿವಸ ಮುಂಚೆ ಕೇಳಿದ್ದರು, ದಿನಾಂಕ ನನಗೆ ನೆನಪಿಲ್ಲ.

11. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಗೊತ್ತು. ನನ್ನ ಹೆಸರಿನಲ್ಲಿ ಚೆಕ್ ಪುಸ್ತಕಗಳನ್ನು ಪಡೆದಿರುತ್ತೇನೆ.

12. ನೀವು ಹೇಳುವಂತೆ ಆರೋಪಿ ನನ್ನ ಬಳಿ ಸಾಲ ಕೇಳಿದಾಗ ನನ್ನ ಬ್ಯಾಂಕ್ ಖಾತೆಯಲ್ಲಿ 2 ಲಕ್ಷ ಹಣ ಇರಲಿಲ್ಲ.

13. ನಾನು ಚೆಕ್ ಮೂಲಕ ಯಾರಿಗೂ ಹಣವನ್ನು ನೀಡುವುದಿಲ್ಲ ಎಂದರೆ ಸರಿ. ಚೆಕ್ ಮೂಲಕ ಹಣ ನೀಡಲು ನನಗೆ ತೊಂದರೆ ಇಲ್ಲ.

14. ನಾನು ಬ್ಯಾಂಕು, ರೈತರಿಂದ ಸಾಲ ಪಡೆದಿರುತ್ತೇನೆ.

15. ಬ್ಯಾಕುಗಳಿಂದ ನಾನು 25 ಲಕ್ಷ ಸಾಲ ಪಡೆದಿದ್ದೆ. ಈಗಲೂ ಸದರಿ ಸಾಲ ಬಾಕಿ ಇರುತ್ತದೆ.

16. ರೈತರಿಂದ 10-15 ಲಕ್ಷ ದ ಒಳಗೆ ಸಾಲ ಪಡೆದಿರುತ್ತೇನೆ. ಅದರಲ್ಲಿ ಸ್ವಲ್ಪ ಮರು ಪಾವತಿ ಮಾಡಿದ್ದೇನೆ.

17. ನನಗೆ ವಾರ್ಷಿಕ ಸುಮಾರು 25 ಲಕ್ಷದವರೆಗೆ ಆದಾಯ ಮಾಡುತ್ತೇನೆ. ಆ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

18. ನನಗೆ ವಾರ್ಷಿಕ ಸುಮಾರು 10-15 ಲಕ್ಷ ಖರ್ಚು ಬರುತ್ತದೆ.

19. ನಮ್ಮ ಕುಟುಂಬಕ್ಕೆ ತಿಂಗಳಿಗೆ ಸುಮಾರು 15-16 ಸಾವಿರ ಖರ್ಚು ಬರುತ್ತದೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ

ಪಿರಿಯಾಪಟ್ಟಣ